ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 1, July-August, 2023, Pp. 92-97
©*IIMRD*, Mysuru
IIMRD JOURNALS
www.iimrd.com

# ಗ್ರಾಮೀಣ ಅಭಿವೃದ್ಧಿಯಲ್ಲಿ ಹೈನುಗಾರಿಕೆಯ ಮಹತ್ವ: ಒಂದು ಅಧ್ಯಯನ

ಡಾ. ಕುಮಾರ್ ಬಿ.ಕೆ.*
*ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜನಗರ.

**ಸಾರಾಂಶ: (Abstract)**

*ಆಧುನಿಕ ಭಾರತದಲ್ಲಿ ಗ್ರಾಮೀಣ ಹೈನುಗಾರಿಕೆ ಕೃಷಿಯ ಒಂದು ಉಪ–ಕಸುಬಾಗಿ ಬೆಳೆದು ಬಂದಿದೆ. ಭಾರತ ಕೃಷಿಪ್ರಧಾನ ರಾಷ್ಟ್ರವಾಗಿದೆ. ಶೇ.69ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದು, ಶೇ.63ರಷ್ಟು ಜನರು ಕೃಷಿಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಈಗಲೂ ಗ್ರಾಮೀಣ ಭಾರತದಲ್ಲಿ ಜನರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿದ್ದಾರೆ. ಸರಾಸರಿ ಕೃಷಿ ಹಿಡುವಳಿಯು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಾ ಬರುತ್ತಿದೆ. ಗ್ರಾಮೀಣ ಜನರ ಆದಾಯವನ್ನು ಹೆಚ್ಚಿಸಬೇಕಾದರೆ, ಮತ್ತು ಅವರ ಜೀವನ ಮಟ್ಟವನ್ನು ಸುಧಾರಿಸಬೇಕಾದರೆ ಕೃಷಿ ಮಾಡುವುದರ ಜೊತೆಗೆ ಹೈನುಗಾರಿಕೆಯಲ್ಲಿ ತೊಡಗಿದಾಗ ವರ್ಷಪೂರ್ತಿ ಜನರು ಕೃಷಿ ಸಂಬಂಧಿ ಚಟುವಟಿಕೆಯಲ್ಲಿ ತೊಡಗಿಕೊಂಡಾಗ ಗ್ರಾಮೀಣ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ.*

**ಮುಖ್ಯಪದಗಳು (Keywords):** ಕೃಷಿ, ಹೈನುಗಾರಿಕೆ, ಉಪ–ಕಸುಬು, ಹಳ್ಳಿಗಳು, ಗ್ರಾಮೀಣ

**ಪೀಠಿಕೆ**

ಭಾರತವು ಕೃಷಿ ಪ್ರಧಾನ ದೇಶ. ಕೃಷಿಯನ್ನು ನಂಬಿ ಹಲವರು ಜೀವನ ನಡೆಸುತ್ತಿದ್ದಾರೆ. ಭಾರತದ ಕೃಷಿ ಚಟುವಟಿಕೆ ಮಳೆಯನ್ನು ಅವಲಂಬಿಸಿದೆ. ಮಳೆಯನ್ನು ನಂಬಿ ವ್ಯವಸಾಯ ಮಾಡುವುದು ಕಷ್ಟವಾಗಿದೆ. ಮಳೆಯನ್ನು ಜೂಜಾಟದ ಜೊತೆಗಾರನಿಗೆ ಹೋಲಿಸಿದ್ದಾರೆ. ಮಳೆ ಬಂದರೆ ಬೆಳೆ ಇಲ್ಲವೆಂದರೆ ಇಲ್ಲ. ಅನಿಶ್ಚಿತ ಮಳೆಯಿಂದ ಕೃಷಿ, ಕೃಷಿ ಸಂಬಂಧಿತ ಚಟುವಟಿಕೆಗಳು ಕಷ್ಟದಲ್ಲಿವೆ. ಆದರೆ ಕೆಲವು ಕೃತಕ ನೀರಾವರಿ ಸೌಲಭ್ಯ ಕಲ್ಪಿಸಿಕೊಂಡಾಗ ಗ್ರಾಮೀಣ ಕೃಷಿ ಹಾಗೂ ಹೈನುಗಾರಿಕೆಗೆ ಸಹಾಯವಾಗುತ್ತದೆ.

ಹೈನುಗಾರಿಕೆಗೆ ಮಳೆಯ ಸೌಲಭ್ಯವಿಲ್ಲದಿದ್ದರೂ ಕೃತಕ ನೀರಾವರಿ ಸೌಲಭ್ಯ ಬಳಸಿ ಭೂಮಿಯಲ್ಲಿ ಕೃಷಿಗೆ ಬೇಡವಾದ ಜಾಗವನ್ನು ಬಳಸಿಕೊಂಡು ಜಾನುವಾರುಗಳಿಗೆ ಮೇವು ಬೆಳೆಸಿ ಹೈನುಗಾರಿಕೆಯನ್ನು ಮಾಡಬಹುದು. ಹೈನುಗಾರಿಕೆಯನ್ನು ನಂಬಿ ಅಂದಾಜು ಶೇ.65 ರಷ್ಟು ಜನರು ಜೀವನ ನಡೆಸುತ್ತಿದ್ದಾರೆ. ಹಸಿರು ಕ್ರಾಂತಿಯ ನಂತರ ಕ್ಷೀರಕ್ರಾಂತಿ ನಡೆದ ಮೇಲೆ ಹಾಲಿನ ಉತ್ಪಾದನೆಯಲ್ಲಿ ಹೆಚ್ಚಳ ಕಂಡು ಬಂದು ಭಾರತ ಪ್ರಪಂಚದಲ್ಲಿಯೇ ಮೊದಲ ಸ್ಥಾನದಲ್ಲಿದೆ.

ಹಾಲು ಒಂದು ಸಂಪೂರ್ಣ ಆಹಾರವಾಗಿದ್ದು, ಭಾರತೀಯ ವೈದ್ಯಕೀಯ ಅನುಸಂಧಾನ ಸಂಸ್ಥೆಯ ಪ್ರಕಾರ ಪ್ರತಿದಿನ ಪ್ರತಿ ಮನುಷ್ಯನಿಗೆ 281.9 ಮಿ.ಲೀ. ಹಾಲು ಬೇಕಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಅದರ ಲಭ್ಯತೆ ಕೇವಲ 189 ಮಿ.ಲೀ. ಇದೆ. ಇದನ್ನು ಗಮನಿಸಿದಾಗ ಹೈನುಗಾರಿಕೆ ಬೆಳೆಸಲು ಸಾಕಷ್ಟು

ಪ್ರಯತ್ನಿಸಬೇಕಾಗಿದೆ. ಹಾಗಾಗಿ ಗ್ರಾಮೀಣ ಪ್ರದೇಶದಲ್ಲಿರುವ ರೈತರು ಹಾಗೂ ಕೃಷಿ ಕಾರ್ಮಿಕರು ಹೈನುಗಾರಿಕೆಯನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡರೆ ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಸುಧಾರಸಲು ಸಾಧ್ಯವಾಗುತ್ತದೆ.

"ಹಾಲು, ಹಾಲಿನ ಉತ್ಪನ್ನಗಳನ್ನು ತಯಾರಿಕೆ ಮತ್ತು ಮಾರಾಟ ಪ್ರಕ್ರೀಯೆಯನ್ನು ಹೈನುಗಾರಿಕೆ ಎಂದು ಕರೆಯಬಹುದು". ಹಾಲು ಒಂದು ಸಂಪೂರ್ಣ ಆಹಾರ. ಇದು ಅತ್ಯಧಿಕ ಜೈವಿಕ ಮೌಲ್ಯವಿರುವ ಪ್ರಾಣಿಜನ್ಯ ಆಹಾರ. ಮಕ್ಕಳಿಂದ ವೃದ್ಧರವರೆವಿಗೂ ಹಾಲು ಬಹುಮುಖ್ಯ ಆಹಾರ. ಜನರು ತಮ್ಮ ದೈನಂದಿನ ಚಟುವಟಿಕೆಗಳನ್ನು ಹಾಲನ್ನು ಬಳಸಿ ಮಾಡಿದ ಕಾಫಿ/ಚಹದಿಂದ ಆರಂಭಿಸುತ್ತಾರೆ. ಇದಲ್ಲದೆ ಹಾಲಿನ ಉತ್ಪನ್ನಗಳಾದ ಮೊಸರು, ಬೆಣ್ಣೆ, ತುಪ್ಪ, ಪನ್ನೀರು, ಲಸ್ಸಿ ಮತ್ತು ಸಿಹಿ ತಿನಿಸುಗಳ ಬೇಡಿಕೆಯು ಹೆಚ್ಚಾಗಿದೆ.

**ಹೈನುಗಾರಿಕೆಯ ಇತಿಹಾಸ**

ಹೈನುಗಾರಿಕೆ ಎಂಬುವುದು ಸಾವಿರಾರು ವರ್ಷಗಳಿಂದಲೂ ವ್ಯವಸಾಯದ ಭಾಗವಾಗಿದೆ. ಇದು ಚಿಕ್ಕ ವೈವಿಧ್ಯಮಯ ಒಕ್ಕಲು ಜಮೀನುಗಳ ಒಂದು ಭಾಗವಾಗಿದ್ದು, ಕಳೆದ ಶತಮಾನಗಳಿಂದ ಹೈನುಗಾರಿಕೆಯ ಉತ್ಪನ್ನಗಳನ್ನು ಜಮೀನುಗಳ ಮೂಲಕ ಅತೀ ದೂಡ್ಡ ಪ್ರಮಾಣದಲ್ಲಿ ಮಾಡಲಾಗುತ್ತದೆ. ಮೇಕೆಗಳು, ಕುರಿಗಳು ಮತ್ತು ಎಮ್ಮೆಗಳನ್ನು ಸಹ ಇದಕ್ಕಾಗಿ ಹೈನುಗಾರಿಕೆಗೆ ಬಳಕೆ ಮಾಡಿಕೊಳ್ಳಲಾಗುತ್ತದೆ. ಕಳೆದ ಶತಮಾನಗಳಲ್ಲಿ ಅಥವಾ ಅದಕ್ಕಿಂತ ಹಿಂದೆ ಕೇವಲ ಹೈನು ಉತ್ಪಾದನೆಯನ್ನು ಮಾಡುತ್ತಿರುವ ದೂಡ್ಡದಾದ ಒಕ್ಕಲು ಜಮೀನು ಹೊರ ಹೊಮ್ಮಿದವು. ನಂತರ ಬೃಹತ್ ಪ್ರಮಾಣದ ಒಕ್ಕಲು ಜಮೀನುಗಳು ಹುಟ್ಟಿಕೊಂಡು ಬಂದಿವೆ ಎನ್ನಬಹುದು.

ಭಾರತದಲ್ಲಿ ಹೈನುಗಾರಿಕೆ ಅಭಿವೃದ್ಧಿಯು ಸ್ವಾತಂತ್ರ್ಯ ನಂತರ ಅಂದರೆ 1962 ನೇಯ ವರ್ಷದ ಅಂತ್ಯಕ್ಕೆ ಅಭಿವೃದ್ಧಿಯಾಗಿರುವುದನ್ನು ಗುರುತಿಸಬಹುದು. ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀಯುತ ಲಾಲ್ ಬಹದ್ದೂರ್ ಶಾಸ್ತ್ರಿಯವರು "ದೇಶದ ಅಭಿವೃದ್ಧಿಯು ಹೈನುಗಾರಿಕೆಯಿಂದ ಮಾತ್ರ ಸಾಧ್ಯ" ಎಂಬುವುದನ್ನು ಗುರುತಿಸಿ 1965 ರಲ್ಲಿ ಗುಜರಾತಿನಲ್ಲಿ 'ಹಾಲು ಉತ್ಪಾದನಾ ನಿಗಮ'ವನ್ನು ಸ್ಥಾಪಿಸುವುದರ ಮುಖಾಂತರ ದೇಶದಲ್ಲಿ ಹೈನುಗಾರಿಕೆಯ ಬೆಳವಣಿಗೆಗೆ ಚಾಲನೆ ನೀಡಿದರು. ನಂತರ 1972 ರಲ್ಲಿ ದೇಶದ ಪ್ರಮುಖ ನಗರಗಳಾದ ಗುಜರಾತ್, ಮುಂಬೈ, ಕಲ್ಕತ್ತ ಮುಂತಾದ ಪ್ರಮುಖ ನಗರಗಳಲ್ಲಿ 'ಕೋ–ಆಪರೇಟೀವ್ ಮಿಲ್ಕ್ ಮಾರ್ಕೆಟಿಂಗ್ ಪೆಡೇರೇಷನ್' ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಜೊತೆಗೆ 'ವರ್ಗೀಸ್ ಕುರಿಯನ್'ರವರ ಕ್ಷೀರಕ್ರಾಂತಿಯ ಕೊಡುಗೆಯಿಂದಾಗಿ ಭಾರತದಲ್ಲಿ ಹೈನುಗಾರಿಕೆಯು ಅತೀ ವೇಗವಾಗಿ ಬೆಳೆದು ಜಾಗತಿಕ ಮಟ್ಟದಲ್ಲಿ ಗುರಿತಿಸಿಕೊಳ್ಳಲು ಸಾಧ್ಯವಾಗಿದೆ.

**ಅಧ್ಯಯನದ ಉದ್ದೇಶಗಳು**

- ಹೈನುಗಾರಿಕೆಯ ಐತಿಹಾಸಿಕ ಹಿನ್ನೆಲೆಯನ್ನು ತಿಳಿಯುವುದು.
- ಹೈನುಗಾರಿಕೆಯಿಂದಾಗಿ ಗ್ರಾಮೀಣ ರೈತರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಗುರುತಿಸುವುದು.
- ಹೈನುಗಾರಿಕೆಯ ಉಪಯೋಗ ಮತ್ತು ಸರ್ಕಾರದ ಕಾರ್ಯಯೋಜನೆಗಳನ್ನು ತಿಳಿಯುವುದು.

**ಸಂಶೋಧನಾ ವಿಧಾನ**

ಪ್ರಸಕ್ತ ಅಧ್ಯಯನವು 'ಗ್ರಾಮೀಣ ಅಭಿವೃದ್ಧಿಯಲ್ಲಿ ಹೈನುಗಾರಿಕೆಯ ಮಹತ್ವ' ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಮಾಧ್ಯಮಿಕ ಮತ್ತು ಪ್ರಾಥಮಿಕ ಮೂಲಗಳಾದ ದಿನಪತ್ರಿಕೆ, ಅಂತರ್‌ಜಾಲ, ವಿಷಯ ಸಂಬಂಧಿತ ಪುಸ್ತಕಗಳು, ಲೇಖನಗಳು, ಪ್ರಸಕ್ತ ಅಂಕಿ–ಅಂಶಗಳು, ಸಂಬಂಧಿತ ಹೈನುಗಾರಿಕೆಯ ಸಂಸ್ಥೆಗಳು ಹಾಗೂ ಅಧಿಕಾರಿಗಳಿಂದ ಪ್ರಶ್ನಾವಳಿ ಹಾಗೂ ಸಂದರ್ಶನದ ಮೂಲಕ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಬನ್ನೂರು ಗ್ರಾಮವನ್ನು ಆಯ್ಕೆಮಾಡಿಕೊಳ್ಳಲಾಗಿದೆ.

**ಕೋಷ್ಟಕ 1: ಬನ್ನೂರು ಗ್ರಾಮದಲ್ಲಿ ಹೈನುಗಾರಿಕೆಯನ್ನು ಅಳವಡಿಸಿಕೊಂಡಿರುವ ಕುಟುಂಬಗಳ ವಿವರ:**

| ಕ್ರ.ಸಂ | ವರ್ಷ | ಒಟ್ಟು ಕುಟುಂಬ | ಕೃಷಿ ಅವಲಂಬಿತರು | ಶೇಕಡವಾರು | ಹೈನುಗಾರಿಕೆ ಅಳವಡಿಸಿಕೊಂಡಿರುವವರು | ಶೇಕಡವಾರು |
|---|---|---|---|---|---|---|
| 01 | 2021 | 220 | 190 | 86.36 | 30 | 13.6 |
| 02 | 2022 | 220 | 142 | 64.5 | 73 | 33.2 |
| 03 | 2023 | 220 | 70 | 31.8 | 150 | 68.2 |

ಬನ್ನೂರು ಗ್ರಾಮದಲ್ಲಿ ಒಟ್ಟು 220 ರೈತ ಕುಟುಂಬಗಳಿದ್ದು 2021 ರಿಂದ 2023 ರ ನಡುವೆ ಮೂರು ವರ್ಷಗಳಲ್ಲಿ ಕೃಷಿಯನ್ನು ಮೂಲ ಕಸುಬಾಗಿ ಹೊಂದಿದ್ದವರ ಪ್ರಮಾಣ ಕಡಿಮೆಯಾಗುತ್ತಾ ಬಂದು, ಕೃಷಿ ಜೊತೆಗೆ ಹೈನುಗಾರಿಕೆ ಅಳವಡಿಸಿಕೊಂಡಿರುವವರ ಪ್ರಮಾಣ ಹೆಚ್ಚಾಗುತ್ತಾ ಬರುತ್ತಿರುವುದನ್ನು ಕೋಷ್ಟಕ 01 ರಲ್ಲಿ ಗಮನಿಸಬಹುದು. ಈ ಕೋಷ್ಟಕ 01 ರಲ್ಲಿನ ಅಂಕಿ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಹೈನುಗಾರಿಕೆ ಗ್ರಾಮೀಣ ಜನರ ಬದುಕಿನ ಭಾಗವಾಗಿದ್ದು ಅದರ ಉಪಯೋಗಗಳನ್ನು ಅರಿತುಕೊಂಡು ಅವರ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಹೈನುಗಾರಿಕೆಯನ್ನು ಅಳವಡಿಸಿಕೊಳ್ಳುತ್ತಿದ್ದಾರೆ ಎಂಬುವುದನ್ನು ಸ್ಪಷ್ಟಪಡಿಸುತ್ತದೆ.

**ಹೈನುಗಾರಿಕೆಯ ಉಪಯೋಗಗಳು**

ಸಮತೋಲಿತ ಮತ್ತು ಆರೋಗ್ಯಕರ ಆಹಾರವನ್ನು ಒದಗಿಸುವಲ್ಲಿ ಹಾಲು ಮತ್ತು ಡೈರಿ ಉತ್ಪನ್ನಗಳು ಎತ್ತಿದ ಕೈ. ಏಕೆಂದರೆ ಅವು ಕ್ಯಾಲ್ಸಿಯಂನ ಸಮೃದ್ಧಿ ಮೂಲಗಳಾಗಿವೆ. ಡೈರಿಯ ಆಹಾರಗಳು ಕ್ಯಾಲ್ಸಿಯಂ, ರಂಜಕ, ಬಿ–ಜೀವ ಸತ್ವಗಳು, ಪೋಟಾಸಿಯಂ ಮತ್ತು ವಿಟಮಿನ್ ಡಿ–ಪ್ಲಸ್, ಪ್ರೋಟೀನ್, ಮೆಗ್ನೀಷಿಯಂ ಮತ್ತು ಇತರ ಪೋಷಕಾಂಶಗಳಿಂದ ತುಂಬಿರುತ್ತದೆ. ಈ ಪೋಷಕಾಂಶಗಳು ಬಲವಾದ ಮೂಳೆಗಳನ್ನು ನಿರ್ಮಿಸಲು ಮತ್ತು ನಿರ್ವಹಿಸಲು ಅತ್ಯವಶ್ಯಕವಾಗಿದೆ. ಹಸುಗಳ ಗೊಬ್ಬರವು ಖನಿಜಗಳಿಂದ ಸಮೃದ್ಧವಾಗಿದೆ. ವಿಶೇಷವಾಗಿ ಸಾರಜನಕ, ರಂಜಕ ಮತ್ತು ಪೋಟಾಸಿಯಂ ಮಣ್ಣಿನೊಂದಿಗೆ ಬೆರೆತಾಗ ಪ್ರಯೋಜನಕಾರಿಯಾದ ಸೂಕ್ಷ್ಮಾಣು ಜೀವಿಗಳ ಬೆಳವಣಿಗೆಯನ್ನು ಬೆಂಬಲಿಸುವುದರಿಂದ ಗೊಬ್ಬರವು ಮಣ್ಣಿನ ವಿನ್ಯಾಸವನ್ನು ಸುಧಾರಿಸುತ್ತದೆ ಹಾಗೂ ತೇವಾಂಶವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಇದರಿಂದಾಗಿ ಉತ್ತಮ ಬೆಳೆಯನ್ನು ನಿರೀಕ್ಷಿಸಬಹುದು. ಗೊ ಮೂತ್ರವು ಮಧುಮೇಹ, ರಕ್ತದೊತ್ತಡ,

ಅಸ್ತಮ, ಸೋರಿಯಾಸಿಸ್, ಹೃದಯಾಘಾತ, ಅಪದಮನಿಗಳಲ್ಲಿ ಅಡೆತಡೆಗಳು, ಫಿಡ್ಸ್, ಕ್ಯಾನ್ಸರ್, ಏಡ್ಸ್, ಸಂಧಿವಾತ, ಮೈಗ್ರೇನ್, ಥೈರಾಯ್ಡ್, ಹುಣ್ಣು, ಮಲಬದ್ಧತೆ, ಸ್ತ್ರೀರೋಗ ಮುಂತಾದ ರೋಗಗಳಿಗೆ ಔಷಧದ ರೊಪದಲ್ಲಿ ಕೆಲಸ ಮಾಡುತ್ತದೆ.

**ಹೈನುಗಾರಿಕೆಯಿಂದಾಗುವ ಅನುಕೂಲಗಳು**

**ಉತ್ತಮ ಪೌಷ್ಟಿಕಾಂಶ ಆಹಾರದ ಉತ್ಪಾದನೆ:** ಹಾಲು ಮತ್ತು ಹಾಲಿನ ಉತ್ಪನ್ನಗಳು ಮನುಷ್ಯರಿಗೆ ಆಹಾರದಲ್ಲಿ ಪ್ರೊಟೀನಿನ ಪ್ರಮುಖ ಉತ್ಪನ್ನವಾಗಿದೆ. ಜೊತೆಗೆ ಬೆಳೆಯುತ್ತಿರುವ ಮಕ್ಕಳಿಗೆ, ರೋಗಿಗಳಿಗೆ ಮತ್ತು ವೃದ್ಧರಿಗೆ ಪ್ರಮುಖ ಆಹಾರವಾಗಿದೆ. ಹಾಲು ಮತ್ತು ಮಾಂಸದಂತಹ ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳನ್ನು ಉತ್ಪಾಧಿಸಲು ಅಗ್ಗದ ಪ್ರಾಣಿಗಳನ್ನು ಬಳಸಿಕೊಳ್ಳಲಾಗುತ್ತದೆ. ಮನೆ ಮತ್ತು ಕೃಷಿ ತ್ಯಾಜ್ಯ ಉಪ–ಉತ್ಪನ್ನಗಳನ್ನು ಪರಿಣಾಮಕಾರಿ ಬಳಕೆ, ಜೊತೆಗೆ ಹೈನುಗಾರಿಕೆಯ ತ್ಯಾಜ್ಯ ವಿಲೇವಾರಿಯ ಸಮಸ್ಯೆಗಳನ್ನು ಕಡಿಮೆಮಾಡುತ್ತದೆ. ಇದಲ್ಲದೆ ಜನಸಂಖ್ಯೆಯ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗುತ್ತಿರುವುದರಿಂದ ಹೈನುಗಾರಿಕೆಯು ವಿಶೇಷವಾಗಿ ಮಹಿಳೆಯರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತದೆ. ಬೆಳೆಯ ಉತ್ಪಾದನೆಯಲ್ಲಿ ತೊಡಗಿರುವ ರೈತರಿಗೆ ಹೈನುಗಾರಿಕೆಯು ಅಂಗಸಂಸ್ಥೆಯಾಗಿ ಉದ್ಯೋಗವನ್ನು ಸೃಷ್ಟಿಸುವುದು ಮಾತ್ರವಲ್ಲದೆ ಹೆಚ್ಚುವರಿ ಕುಟುಂಬದ ಕಾರ್ಮಿಕರನ್ನು ಬಳಕೆಮಾಡಿಕೊಂಡು ಆದಾಯವನ್ನು ಹೆಚ್ಚಿಸುತ್ತದೆ.

ಹಾಲಿಗೆ ಹೆಚ್ಚಿನ ಮಾರುಕಟ್ಟೆಯ ಬೇಡಿಕೆ ಉಂಟಾದರೆ ಅದರ ವಿಲೇವಾರಿಯು ಸುಲಭವಾಗುತ್ತದೆ. ಬೆಳೆಯ ಉತ್ಪಾದನೆಗಿಂತ ಭಿನ್ನವಾಗಿ ಹಾಲಿನ ಬೆಲೆಗೆ ಋತುಮಾನದ ಏರಿತಗಳು ಕಡಿಮೆ, ಮತ್ತು ಇದು ಬೆಳೆಯ ಉತ್ಪಾದನೆಯ ಋತುವಿನ ಅವಧಿಯಲ್ಲಿ ರೈತರಿಗೆ ಜೀವನಾಧಾರ ಆದಾಯವನ್ನು ಸೃಷ್ಟಿಸುತ್ತದೆ. ಹೈನುಗಾರಿಕೆಯಲ್ಲಿ ತೊಡಗಿರುವ ರೈತರ ಪ್ರಮುಖ ಗುಂಪುಗಳು ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರು. ಭೂ–ರಹಿತ ಕೃಷಿಗಾಗಿ ಹೈನುಗಾರಿಕೆ ಸಾಧನವಾಗಿದೆ. ಆದುದರಿಂದ ಇಂದು ಬಡವರು ಮತ್ತು ಭೂರಹಿತ ಕೃಷಿ ಕಾರ್ಮಿಕರ ಉದ್ಯೋಗವಾಗಿದೆ ಎನ್ನಬಹುದು.

ಹೈನುಗಾರಿಕೆಯಿಂದ ವರ್ಷವಿಡೀ ಆದಾಯವನ್ನು ಪಡೆಯಬಹುದು. ಹೈನುಗಾರಿಕೆಯಿಂದ ಹಣಕಾಸಿನ ನೆರವನ್ನು ಸಣ್ಣ ಪ್ರಮಾಣದ ರೈತರು ಪಡೆಯುವಲ್ಲಿ ಯಶಸ್ವಿಯಾಗುತ್ತಾರೆ. ಮಹಿಳಾ ಸ್ವ–ಸಹಾಯ ಸಂಘಗಳಿಗೆ ವಾರದ ಚೀಟಿಯನ್ನು ಕಟ್ಟಲು ಸಹಾಯವಾಗುತ್ತದೆ. ಮಕ್ಕಳ ವಿದ್ಯಾಭ್ಯಾಸಕ್ಕೆ ತಗಲುವ ಖರ್ಚನ್ನು ಭರಿಸಬಹುದಾಗಿದೆ. ಸೂಕ್ಷ್ಮ ಹಣಕಾಸಿನ ಉಳಿತಾಯಕ್ಕೆ ನೆರವಾಗುತ್ತದೆ. ಮನೆಗೆ ಬೇಕಾದ ಸಣ್ಣ–ಪುಟ್ಟ ಖರ್ಚನ್ನು ಭರಿಸಬಹುದು. ವ್ಯವಸಾಯೋಪಕರಣಗಳನ್ನು ಕೊಂಡುಕೊಳ್ಳಬಹುದು ಹಾಗೂ ಭೂಮಿಯನ್ನು ಫಲವತ್ತತೆಗೊಳಿಸಬಹುದಾಗಿದೆ.

**ಹೈನುಗಾರಿಕಾಬಿವೃದ್ಧಿಗೆ ಸರ್ಕಾರದ ಯೋಜನೆಗಳು**

ಪ್ರಧಾನ ಮಂತ್ರಿ ಮುದ್ರಾ ಸಾಲ ಯೋಜನೆಗಳ ಮುಖಾಂತರ ಹೈನುಗಾರಿಕೆಯನ್ನು ಅನುಸರಿಸಲು ಉದ್ಧೇಶಿಸಿರುವ ಗ್ರಾಮೀಣ ರೈತರಿಗೆ ಸ್ಥಳೀಯ ಬ್ಯಾಂಕುಗಳ ಮೂಲಕ ಕಡಿಮೆ ಬಡ್ಡಿದರದಲ್ಲಿ ಸಾಲ

ಸೌಲಭ್ಯವನ್ನು ನೀಡಲಾಗುತ್ತದೆ. ಕೇಂದ್ರ ಸರ್ಕಾರದಿಂದ ನಬಾರ್ಡ್ ಬ್ಯಾಂಕಿನ ಮೂಲಕ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ರೈತರಿಗೆ ಡೈರಿ ಉದ್ಯಮದಲ್ಲಿ ತೊಡಗಲು ಸಾಲ ಸೌಲಭ್ಯಗಳನ್ನು ಮಾಡಿಕೊಡಲಾಗಿದೆ. ಜೊತೆಗೆ ಈ ಯೋಜನೆಯ ಮುಖಾಂತರ ಪರಿಶಿಷ್ಟ ಜಾತಿ ಮತ್ತು ಪರಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.33 ರಷ್ಟು ಸಬ್ಸಿಡಿ ನೀಡಲಾಗುತ್ತದೆ ಹಾಗೂ ಸಾಮಾನ್ಯ ವರ್ಗದವರಿಗೆ ಶೇ.25 ರಷ್ಟು ಸಬ್ಸಿಡಿ ನೀಡಲಾಗುತ್ತದೆ. ಈ ಯೋಜನೆಗಾಗಿ 25 ಲಕ್ಷದವರೆವಿಗೂ ಸಾಲ ಪಡೆಯಲು ಅವಕಾಶಮಾಡಿಕೊಡಲಾಗಿದೆ.

2021–22ನೇ ಸಾಲಿನಲ್ಲಿ ಜಾನುವಾರು ಕ್ಷೇತ್ರದ ಬೆಳವಣಿಗೆಯನ್ನು ಮತ್ತಷ್ಟು ಹೆಚ್ಚಿಸಲು ಹಾಗೂ ಪಶುಸಂಗೋಪನೆಯಲ್ಲಿ ತೊಡಗಿರುವ 10 ಕೋಟಿ ರೈತರಿಗೆ ಕೇಂದ್ರ ಸರ್ಕಾರವು ವಿಶೇಷ ಪ್ಯಾಕೇಜುಗಳನ್ನು 5 ವರ್ಷಕ್ಕೆ ಸಂಬಂಧಿಸಿದಂತೆ 9,800 ಕೋಟಿಯನ್ನು ಮೀಸಲಿಡಲಾಗಿದೆ. 'ರಾಷ್ಟ್ರೀಯ ಗೋಕುಲ್ ಮಿಷನ್'(RGM)ನ್ನು ಡಿಸೆಂಬರ್ 2014 ರಿಂದ ಸ್ಥಳೀಯ ಗೋವು ಅಭಿವೃದ್ಧಿ ಹಾಗೂ ಸಂರಕ್ಷಣೆಗಾಗಿ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಈ ಯೋಜನೆಯಿಂದ ಹಾಲಿನ ಉತ್ಪಾದನೆ ಹಾಗೂ ಬೇಡಿಕೆಯನ್ನು ಪೂರೈಸಲು ವಿಶೇಷವಾಗಿ ಗ್ರಾಮೀಣ ಭಾಗದ ರೈತರಿಗೆ ಹೆಚ್ಚು ಲಾಭವನ್ನು ಗಳಿಸಲು ಜಾರಿಗೆ ತರಲಾಗಿದೆ. ಈ ಯೋಜನೆಯು 2021 ರಿಂದ 2026ರ ವರೆಗೆ ಮುಂದುವರೆಸಲು ಕಾರ್ಯಕ್ರಮಗಳನ್ನು ರೂಪಿಸಿದ್ದು, ಇದಕ್ಕಾಗಿ ರೂ.2,400 ಕೋಟಿಯನ್ನು 'ಛತ್ರಿ ಯೋಜನಾ' ಕಾರ್ಯಕ್ರಮದ ಅಡಿಯಲ್ಲಿ ರೂಪಿಸಲು ಉದ್ದೇಶಿಸಲಾಗಿದೆ.

**ಐವಿಎಫ್ ತಳಿಗಳ ಸುಧಾರಣಾ ಕಾರ್ಯಕ್ರಮ:** ಹೈನುಗಾರಿಕೆಗೆ ಸಂಬಂಧಿಸಿದಂತೆ ಹೆಣ್ಣು ಕರುಗಳನ್ನು ಉತ್ಪಾದಿಸಲು ಐ.ವಿ.ಎಫ್ ತಂತ್ರಜ್ಞಾನ ಮತ್ತು ಲೈಂಗಿಕ ವಿಂಗಡಣೆಯ ವೀರ್ಯದೊಂದಿಗೆ ಕೃತಕ ಗರ್ಭಧಾರಣೆಯನ್ನು ಅಭಿವೃದ್ಧಿಪಡಿಸಲಾಗುತ್ತದೆ. ಇದರಲ್ಲಿ ಎಮ್ಮೆ, ಹಸುಗಳನ್ನು ಬಳಸಿಕೊಂಡು 4000 ಕೆ.ಜಿ ಹಾಲನ್ನು ಉತ್ಪಾದಿಸುವ ಅನುವಂಶೀಯ ಸಾಮರ್ಥ್ಯ ಹೊಂದಿರುವ ಹೆಣ್ಣು ಕರುಗಳನ್ನು ಉತ್ಪಾದನೆ ಮಾಡಿ ರೈತರಲ್ಲಿ ಆದಾಯವನ್ನು ಹೆಚ್ಚಿಸುವಂತೆ ಮಾಡಿದೆ. ಈ ಯೋಜನೆಯು 5 ವರ್ಷಕ್ಕೆ ಮಾತ್ರ ಸೀಮಿತವಾಗಿದ್ದು ಇದಕ್ಕಾಗಿ 20 ಬ್ಯಾಚ್‌ಗಳನ್ನು ದೇಶದಲ್ಲಿ ತೆರೆಯಲಾಗಿದೆ.

**ರೈತ ಜಾಗೃತಿ ಕಾರ್ಯಕ್ರಮ**: ರೈತರಲ್ಲಿ ಹೈನುಗಾರಿಕೆ ಮತ್ತು ಕೃಷಿ ಫಲವತ್ತತೆಯನ್ನು ಹೆಚ್ಚಿಸುವ ಸಲುವಾಗಿ ಗ್ರಾಮೀಣ ಭಾಗದ ರೈತರಿಗೆ ಕಾರ್ಯಕ್ರಮದಡಿಯಲ್ಲಿ ಶಿಬಿರಗಳನ್ನು ಆಯೋಜಿಸಲಾಗಿದ್ದು, ಈ ಯೋಜನೆಗಾಗಿ ಆಯಾಯ ರಾಜ್ಯ ಸರ್ಕಾರಕ್ಕೆ ಹಣವನ್ನು ಬಿಡುಗಡೆಮಾಡಲು ಸೂಚಿಸಲಾಗಿದೆ.

**ಡೈರಿ ಅಭಿವೃದ್ಧಿಗಾಗಿ ರಾಷ್ಟ್ರೀಯ ಕಾರ್ಯಕ್ರಮ:** ಪಶುಸಂಗೋಪನೆ ಹಾಗೂ ಹೈನುಗಾರಿಕೆ ಇಲಾಖೆಯು 2014 ಫೆಬ್ರವರಿಯಿಂದ ದೇಶದಾಧ್ಯಂತ ಡೈರಿ ಅಭಿವೃದ್ಧಿ ರಾಷ್ಟ್ರೀಯ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಿದ್ದು (NPDD) ಇದರ ಮೂಲ ಉದ್ದೇಶ ಹಾಲು ಉತ್ಪಾದನೆಯ ಹೆಚ್ಚಳ, ಹಾಲು ಮಾರಾಟಕ್ಕೆ ಮಾರುಕಟ್ಟೆಯ ಸ್ಥಾಪನೆ ಮೂಲ ಸೌಕರ್ಯಗಳನ್ನು ಬಲಪಡಿಸುವ ಯೋಜನೆ ಇದಾಗಿದೆ.

**ಉಪಸಂಹಾರ**

ಹೈನುಗಾರಿಕೆ ಎಂಬುದು ಸಾವಿರಾರು ವರ್ಷಗಳಿಂದಲೂ ವ್ಯವಸಾಯದ ಜೊತೆ ನಡೆದು ಬಂದ ಸಣ್ಣ ಪ್ರಮಾಣದ ಉದ್ಯೋಗವಾಗಿದೆ. ಕಳೆದ ಶತಮಾನದಿಂದಲೂ ಗ್ರಾಮೀಣ ಭಾಗದ ಜನರ ಬದುಕಿನ ಸುಧಾರಣೆಯಲ್ಲಿ ಮುಖ್ಯವಾದ ಪಾತ್ರ ವಹಿಸುತ್ತಾ ಬಂದಿದೆ. ಅದರಲ್ಲೂ ವಿಶೇಷವಾಗಿ ಮಹಿಳೆಯರ ಸಬಲೀಕರಣಗೊಳಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ. ಗ್ರಾಮೀಣ ಭಾಗಗಳಲ್ಲಿ ಉದ್ಯೋಗ ಸೃಷ್ಟಿಸುವಲ್ಲಿ ಸಹಕಾರಿಯಾಗಿದೆ. ಒಟ್ಟಾರೆ ಗ್ರಾಮೀಣ ಜನರ ಸಾಮಾಜಿಕ ಮತ್ತು ಆರ್ಥಿಕ ಮಟ್ಟವನ್ನು ಹೆಚ್ಚಿಸಲು ಸಾಧ್ಯವಾಗಿದೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- ಬ್ಯಾನರ್ಜಿ, ಜಿ. ಸಿ. (2019). ಅನಿಮಲ್ ಹಜ್‌ಬೆಂಡ್ರಿ. ಹೆಚ್.ಎಸ್.ಆರ್.ಎ ಪಬ್ಲಿಕೇಷನ್, ಮುಂಬೈ.
- ಕೃಷಿ, ಪಶುಸಂಗೋಪನೆ ಮತ್ತು ಆಹಾರ ಸಂಸ್ಕರಣೆ ಸಮಿತಿ. (2016). ಪಾರ್ಲಿಮೆಂಟ್ ಇನ್ ಇಂಡಿಯಾ ಪಬ್ಲಿಕೇಷನ್.
- ಮಣಿಕಂಠ ಬಿಳ್ಳೂರು. (2012). ಹೈನುಗಾರಕೆ ಹಾಗೂ ಗೋವಿನ ಉತ್ಪನ್ನಗಳ ಸಮಗ್ರ ಮಾಹಿತಿ. ಚಿನ್ಮಹಿ ಪ್ರಕಾಶನ, ಚಿಕ್ಕಮಗಳೂರು.
- ಪಸ್ಕಾಲ್, ಎನ್. (2018). ಪಶುಪಾಲನೆ ಮತ್ತು ಹೈನುಗಾರಿಕೆ. ಅಗ್ನಿ ಹೋತ್ರಿ ಪ್ರೇಸ್, ನವದೆಹಲಿ.
- ರಾಷ್ಟ್ರೀಯ ಹೈನುಗಾರಿಕೆಯ ಅಭಿವೃದ್ಧಿಮಂಡಳಿ ಅಧಿನಿಯಮ 1987ರ ವರದಿ